O.S 470/2014

DW-1

ದಿ. 03.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ- ವಾದಿಗಳ ಪರ ವಕೀಲರಾದ ಶ್ರೀ.ಸಿ ಎಂ ಜೆ ರವರಿಂದಃ-**

6. ನಿಡಿ-3 ರಲ್ಲಿ ವಾದಿಗಳ ಸಹಿಯಾಗಲೀ ಅವರ ತಂದೆಯ ಸಹಿಯಾಗಲಿ ಇಲ್ಲ ಎಂದರೆ ಸರಿ. ನಿಡಿ-6 ರಂತೆ ದಿನಾಂಕ 16.01.2014 ರಲ್ಲಿ ಒಂದು ಒಪ್ಪಿಗೆ ಪತ್ರವನ್ನು ಬರೆಯಿಸಿಕೊಂಡಿರುತ್ತೇವೆ ಎಂದರೆ ಸರಿ. ಕರಿಯಪ್ಪ, ಕೆಂಚಪ್ಪ ಮತ್ತು ಮೊಟೇಗೌಡರು ವಾದಿಯ ತಂದೆಯ ಅಣ್ಣ ತಮ್ಮಂದಿರು ಎಂದರೆ ಸರಿ. ಕರಿಯಪ್ಪ, ಕೆಂಚಪ್ಪ ಮತ್ತು ಮೊಟೇಗೌಡರು ಜಯಲಕ್ಷ್ಮಿರೆಡ್ಡಿ ಮತ್ತು ಎಂ.ಶಶಿಭೂಷಣರೆಡ್ಡಿರವರಿಗೆ ಜಮೀನು ಮಾರಾಟ ಮಾಡುವ ಕಾಲಕ್ಕೆ ಅವರ ನಡುವೆ ಯಾವುದೇ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರ ಬರೆದುಕೊಡುವ ಕಾಲಕ್ಕೆ ನನ್ನ ಮಾರಾಟದಾರರ ಕುಟುಂಬದಲ್ಲಿ ವಿಭಾಗ ಆಗಿಲ್ಲ ಎಂಬ ಅಂಶವು ನಂತರದಲ್ಲಿ ನನಗೆ ಕಂಡು ಬಂದ ಕಾರಣ ನಾನು ನಿಡಿ-6 ರಂತೆ ಒಪ್ಪಿಗೆ ಪತ್ರವನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಜಯಲಕ್ಷ್ಮಿರೆಡ್ಡಿ ಮತ್ತು ಎಂ.ಶಶಿಭೂಷಣರೆಡ್ಡಿಯವರು ಜಮೀನು ಮಾರಾಟ ಮಾಡಿದ ನಂತರ ನಿಡಿ-6 ರಂತೆ ಒಪ್ಪಿಗೆ ಪತ್ರವನ್ನು ಬರೆಯಿಸಿಕೊಳ್ಳುವ ಅವಶ್ಯಕತೆ ಏನು ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಜಯಲಕ್ಷ್ಮಿರೆಡ್ಡಿ ಮತ್ತು ಎಂ.ಶಶಿಭೂಷಣರೆಡ್ಡಿರವರು ತಮ್ಮ ಹೆಸರಿಗೆ ಖರೀದಿ ಪತ್ರ ಬರೆಯಿಸಿಕೊಳ್ಳುವ ಕಾಲಕ್ಕೆ ಕೆಲವರ ಸಹಿಗಳನ್ನು ಹಾಕಿಸಿಕೊಳ್ಳುವುದನ್ನು ಬಿಟ್ಟಿದ್ದರು ಹಾಗಾಗಿ ನನಗೆ ಕ್ರಯಪತ್ರ ಬರೆದುಕೊಟ್ಟ ನಂತರ ಅವರನ್ನು ಕರೆಯಿಸಿ ನಿಡಿ-6 ರಂತೆ ಅವರಿಂದ ಒಪ್ಪಿಗೆ ಪತ್ರ ಬರೆಯಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಿದ್ದಲಿಂಗೇಗೌಡ

, ಕರಿಯಪ್ಪ,ಕೆಂಚಪ್ಪ ಮತ್ತು ಮೊಟೇಗೌಡರು ಜಯಲಕ್ಷ್ಮಿರೆಡ್ಡಿ ಮತ್ತು ಎಂ.ಶಶಿಭೂಷಣರೆಡ್ಡಿರವರಿಗೆ ಖರೀದಿ ಪತ್ರ ಬರೆದುಕೊಡುವ ಕಾಲಕ್ಕೆ ಅವರೆಲ್ಲರೂ ಒಟ್ಟು ಕುಟುಂಬದ ಸದಸ್ಯರಾಗಿದ್ದರು ಮತ್ತು ಆ ಸ್ವತ್ತು ಒಟ್ಟು ಕುಟುಂಬದ ಆಸ್ತಿಯಾಗಿತ್ತು ಎಂದರೆ ಸರಿಯಲ್ಲ. ಈ ಮೇಲಿನ ವಿಚಾರವನ್ನು ನಿಡಿ-6 ರಲ್ಲಿ ವಿವರವಾಗಿ ಬರೆಯಿಸಿ ಅವರುಗಳ ಸಹಿಯನ್ನು ಅದಕ್ಕೆ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನಾವು ಆ ಸಮಯದಲ್ಲಿ ನಿಡಿ-6 ಕ್ಕೆ ಸಹಿ ಹಾಕುವಂತೆ ವಾದಿಗಳನ್ನು ಸಹ ಕೇಳಿದ್ದೆವು ಆದರೆ ವಾದಿಗಳು ಅದು ಅವರ ಒಟ್ಟು ಕುಟುಂಬದ ಆಸ್ತಿಯಾದ ಕಾರಣ ಸಹಿ ಹಾಕಲು ಒಪ್ಪಲಿಲ್ಲ ಎಂದರೆ ಸರಿಯಲ್ಲ. ಕೇವಲ ಕರಿಯಪ್ಪ, ಕೆಂಚಪ್ಪ ಮತ್ತು ಮೋಟೇಗೌಡರಿಂದ ಒಪ್ಪಿಗೆ ಸಹಿಗಳನ್ನು ಹಾಕಿಸಿಕೊಂಡ ಕಾರಣ ಆ ಆಸ್ತಿಗಳಲ್ಲಿ ನಮಗೂ ಭಾಗ ಇದೆ ಎಂದು ವಾದಿಗಳು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

7. ನಿಡಿ-13 ರಿಂದ ನಿಡಿ-17 ರ ಪ್ರಕಾರ ಆ ಜಮೀನುಗಳಲ್ಲಿ ವಾದಿಯ ತಂದೆಯಾದ ಹೊನ್ನೆಗೌಡರ ಹೆಸರಿನ ಸಮೇತ ಉಳಿದವರೊಂದಿಗೆ ಜಂಟಿಯಾಗಿ ಬರುತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು 2013 ರಲ್ಲಿ ಜಮೀನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿದ ಎಲ್ಲಾ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಮಾರಾಟದಾರರು ಜಮೀನು ಖರೀದಿ ಮಾಡುವ ಕಾರಣ ಆ ಜಮೀನಿನ ಖಾತೆಯು ಸಹ ಅವರ ಕುಟುಂಬದವರ ಹೆಸರಿಗೆ ಜಂಟಿಯಾಗಿ ಬರುತ್ತಿತ್ತು ಎಂದರೆ ಸಾಕ್ಷಿಯು ಬರುತ್ತಿರಬಹುದು ಅವರು ನೋಡದೇ ಖರೀದಿಸಿರಬಹುದು ಎಂದು ನುಡಿಯುತ್ತಾರೆ. ನನ್ನ ಮಾರಾಟದಾರರು ಒಟ್ಟು ಕುಟುಂಬದ ಆಸ್ತಿಯನ್ನು ನೋಡದೇ ಖರೀದಿಸಿದ್ದ ಕಾರಣ ನಾನು ಜಮೀನು ಖರೀದಿಸಿದ ನಂತರ ನಿಡಿ-6 ರಂತೆ ವಾದಿಯ ಕುಟುಂಬದವರಿಂದ ಒಪ್ಪಿಗೆ ಪತ್ರವನ್ನು ಬರೆಯಿಸಿಕೊಂಡಿರುತ್ತೇನೆ

ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೂ ಸಹ ಸಮಾನವಾದ ಹಿಸ್ಸೆ ಇದೆ ಎಂಬ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಜಮೀನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಗಳ ಪಿತ್ರಾರ್ಜಿತವಾದ ಆಸ್ತಿಗಳು ಎಂಬ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಜಮೀನು ಖರೀದಿ ಮಾಡಿದ ಕಾರಣ ಪಿತ್ರಾರ್ಜಿತವಾದ ಆಸ್ತಿ ಅಲ್ಲ ಎಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

ಓ ಹೇ ಕೇ ಸರಿ ಇದೆ

(ರಾಧಾ ಎಸ್ )
ಅ/ಛ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .